# ಸುಗ್ಗಿ ಹಕ್ಕಿ

ಸುಗ್ಗಿ ಹಕ್ಕಿಬರ್ತಾವಲ್ಲ
ಹಿಗ್ಗಿನಿಂದ ಮಾಗಡಿಗೆ
ಅಂಥಾ ದೊಡ್ಡ ಕೆರೆಯೇನಿಲ್ಲ
ನಂಟೇನಿದೆಯೋ ಅವುಗಳಿಗೆ

ನೋಡೋದಕ್ಕ ಹಬ್ಬದ ಹಂಗ
ಬೆಳಗು ಮತ್ತ ಸಂಜಿಗೆ
ತೊಟ್ಟಿಲು ಕಟ್ಟುತ್ತಾವ ಚಂದ
ಜಾಲಿ–ಬೇವಿನ ಟೊಂಗಿಗೆ

ಹಡೆಯೋದಕ್ಕ ಬರುವ ಹಂಗ
ಕೊಟ್ಟ ಮಕ್ಕಳು ತವರಿಗೆ
ದೇಶ ದಾಟಿ ಬರ್ತಾವಪ್ಪ
ವೀಸಾ ಇಲ್ಲ ಇವುಗಳಿಗೆ

ಈಜೋ ಪಾಠ ಕಲಿಸುತ್ತಾವೆ
ಕೆರೆಯ ನಡುವೆ ಮರಿಗಳಿಗೆ
ಗಡಿಗಳೆಲ್ಲ ನಮಗೆ ಮಾತ್ರ
ಹಾರುತ್ತಾವೆ ಬಾನಿಗೆ

ಅಕ್ಕ ಪಕ್ಕದ ಹೊಲಗಳೆಲ್ಲ
ಹಕ್ಕಲಕ್ಕವು ಹಸುವಿಗೆ
ಪ್ರೀತಿ–ಕರುಣೆ ಕಾಯುತ್ತಾವೆ
ಭೇದಗಳುಂಟೆ ಇವುಗಳಿಗೆ

ಹೊಕ್ಕಾವಪ್ಪ ಮತ್ತ ಹೊಳ್ಳಿ
ಬಂದಲ್ಲಿಗೆ... ಬಾಳಿಗೆ
ಕಲಿಬೇಕಪ್ಪ ಕಲಿತೋರು
ಬಾಳೋದಕ್ಕ ನಾಳಿಗೆ

■ ವಿನಾಯಕ ರಾ. ಕಮತದ



ವಿಜಯಕುಮಾರಿ

## ಕುಂಚ ಪ್ರಪಂಚ



**ಡಿ. ಶಮಂತ್,** 6ನೇ ತರಗತಿ, ಕೇಂದ್ರೀಯ ವಿದ್ಯಾಲಯ ಡಿ.ಆರ್.ಡಿ.ಒ. ಬೆಂಗಳೂರು-93





**ಅದ್ವಿಕಾ ಕೃಷ್ಣ,** 1ನೇ ತರಗತಿ, ವಿಟ್ಲ ಜೇಸಿಸ್ ಇಂಗ್ಲಿಷ್ ಮಾಧ್ಯಮ ಶಾಲೆ, ವಿಟ್ಲ

**ಸಹನಾ ಕೋಳೂರ,** 7ನೇ ತರಗತಿ ಸಂತ ಫಿಲೋಮಿನಾ ಹೈಸ್ಕೂಲ್ ಬಳ್ಳಾರಿ

